12 DEC 2017

# ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)


ನಿಗಮದ ನೋಂದಾಯಿತ ಕಛೇರಿ ವಿಳಾಸ.
#ಸಿ.ಎ.29, ವಿಜಯನಗರ, 2ನೇ ಹಂತ,
ಹಿನ್‌ಕಲ್ ಹತ್ತಿರ, ಮೈಸೂರು-570017.
ನಿಗಮದ ವೆಬ್ ಸೈಟ್ ವಿಳಾಸ:-
WWW.cescmysore.org
ಇಮೇಲ್ : gmcescmysore@gmail.com
CIN U40109KA2004SGC035177

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ),
ರವರ ಕಛೇರಿ,
ಕಾರ್ಯ ಮತ್ತು ಪಾಲನಾ ನಗರ ಉಪ ವಿಭಾಗ
ಚಾ.ವಿ.ಸ.ನಿ.ನಿ. ಮಳವಳ್ಳಿ – 430571.
ದೂರವಾಣಿ ಸಂಖ್ಯೆ: 08231-242026
ಮೊಬೈಲ್ ಸಂಖ್ಯೆ: +91-9448994856
ಇ-ಮೇಲ್: aeemalavalli1@cescmysore.0rg


ಕ್ರಮಾಂಕ: ಸಕಾನಿಇಂ(ವಿ)/ಸಇಂ(ತಾಂ)/ನಉವಿಮ/2017-18/1631-39 ದಿನಾಂಕ: 07-12-2017

## -: ಸಭಾ ನಡಾವಳಿಕೆ :-

ದಿನಾಂಕ:- 25-11-2017 ರಂದು ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ), ಸೆಸ್ಕ್, ಮಂಡ್ಯ ವೃತ್ತ, ಮಂಡ್ಯ ರವರ ಅಧ್ಯಕ್ಷತೆಯಲ್ಲಿ ಸೆಸ್ಕ್, ನಗರ ಉಪ ವಿಭಾಗ, ಮಳವಳ್ಳಿಯಲ್ಲಿ ನಡೆದ ಜನ ಸಂಪರ್ಕ ಸಭೆಯ ಸಭಾ ನಡಾವಳಿ.

**ಹಾಜರಿದ್ದ ಅಧಿಕಾರಿಗಳು/ಸಿಬ್ಬಂದಿ ವರ್ಗದವರು**

1) ಶ್ರೀ.ಎ.ಎನ್.ರವಿಶಂಕರ್, : ಅಧೀಕ್ಷಕ ಇಂಜಿನಿಯರ್(ವಿ), ವೃತ್ತ ಕಛೇರಿ, ಸೆಸ್ಕ್, ಮಂಡ್ಯ.
2) ಶ್ರೀ.ರವಿಶಂಕರ್, : ಕಾರ್ಯನಿರ್ವಾಹಕ ಇಂಜಿನಿಯರ್(ವಿ), ವೃತ್ತ ಕಛೇರಿ, ಸೆಸ್ಕ್, ಮಂಡ್ಯ.
3) ಶ್ರೀಮತಿ, ಶ್ವೇತಾ : ಪ್ರಭಾರ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಮದ್ದೂರು ವಿಭಾಗ,ಸೆಸ್ಕ್,ಮದ್ದೂರು.
3) ಶ್ರೀ.ಆರ್.ಪರಮೇಶ್ವರಪ್ಪ, : ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ನಗರ ಉ/ವಿ, ಸೆಸ್ಕ್, ಮಳವಳ್ಳಿ.
4) ಶ್ರೀಮತಿ.ಪಿ.ರಾಜೇಶ್ವರಿ, : ಸಹಾಯಕ ಇಂಜಿನಿಯರ್(ತಾಂ). ನಗರ ಉ/ವಿ. ಸೆಸ್ಕ್, ಮಳವಳ್ಳಿ.
9) ಶ್ರೀ.ಕೆ.ಎಲ್.ಮಧುಸೂಧನ್. : ಕಿರಿಯ ಇಂಜಿನಿಯರ್(ವಿ), ಹಾಡ್ಲಿ ಶಾಖೆ. ಸೆಸ್ಕ್, ನಗರ ಉ/ವಿ.ಮಳವಳ್ಳಿ.
10) ಶ್ರೀ.ಹನುಮಂತಯ್ಯ, : ಪ್ರಭಾರ ಕಿರಿಯ ಇಂಜಿನಿಯರ್(ವಿ), ಕಾಗೇಪುರ ಶಾಖೆ, ಸೆಸ್ಕ್,ನಗರ ಉ/ವಿ.ಮಳವಳ್ಳಿ.

| ಕ್ರ. ಸಂ. | ದೂರುದಾರರ ಹೆಸರು ಮತ್ತು ವಿಳಾಸ | ಮೊಬೈಲ್ ಸಂಖ್ಯೆ | ದೂರಿನ ವಿಷಯ | ಸಭೆಯಲ್ಲಿ ತೆಗೆದುಕೊಂಡ ನಿರ್ಣಯ | ಸಂಬಂಧಿಸಿದ ಅಧಿಕಾರಿ |
|---|---|---|---|---|---|
| 1 | ಶಿವಲಿಂಗಯ್ಯ, ದಾವಣಿ | 9972622248 | 100ಕೆವಿಎ ಪರಿವರ್ತಕಕ್ಕೆ 30 ಐಪಿ ಸೆಟ್‌ಗಳು ಇದ್ದು ಜಯರಾಮು ಎಂಬುವವರು ನೇರವಾಗಿ ಪರಿವರ್ತಕದಿಂದ ಸಂಪರ್ಕ ಪಡೆದು ಅನಧೀಕೃತ ಐಪಿ ಸೆಟ್ ರನ್ ಮಾಡಿದಾಗ ಉಳಿದ ಯಾವ ಐಪಿ ಸೆಟ್‌ಗಳು ರನ್ ಆಗುವುದಿಲ್ಲ ಎಂದು ಸ್ಥಳ ಪರಿಶೀಲನೆ ಮಾಡಿ ಇದನ್ನು ಸರಿಪಡಿಸಲು ಕೋರಿರುತ್ತಾರೆ. | ಸ್ಥಳ ಪರಿಶೀಲನೆ ಮಾಡಿ ಸಂಬಂಧಿಸಿದ ವ್ಯಕ್ತಿಗೆ ಸೂಕ್ತ ನಿರ್ದೇಶನ ನೀಡಲು ಸೂಚಿಸಲಾಯಿತು. | ಸಹಾಯಕ ಇಂಜಿನಿಯರ್, ಘಟಕ-1, |
| | [illegible]ಕುಮಾರ್, ಮಾಗನೂರು, ಪತ್ರಕರ್ತರು | 9513000019 | ಮಳವಳ್ಳಿ ಪಟ್ಟಣದ ಆದರ್ಶ ಶಾಲೆ ಆವರಣದಲ್ಲಿ ವಿದ್ಯುತ್ ಕಂಬಗಳಿದ್ದು ಅಪಾಯ ಸ್ಥಿತಿಯಲ್ಲಿರುವ ಅವುಗಳನ್ನು | ಅಲ್ಲಿ ವಿದ್ಯುತ್ ಮಾರ್ಗದ ಅವಶ್ಯಕತೆ ಇಲ್ಲವೆಂದು ಕಂಡುಬಂದಿದ್ದರಿಂದ ಕೂಡಲೆ ವಿದ್ಯುತ್ ಸಂಪರ್ಕ | ಸಹಾಯಕ ಇಂಜಿನಿಯರ್, ಘಟಕ-1, |


S E E (Elecl)
Works Circle
CESC, Mandya
DCA
6058
14/12/17

| | | | | |
|---|---|---|---|---|
| | | ಬದಲಾಯಿಸಲು ಕೋರಿದರು. | ಕಡಿತಗೊಳಿಸಿ ಕಂಬಗಳನ್ನು ತೆಗೆದು ಉಗ್ರಾಣಕ್ಕೆ ಹಿಂದಿರುಗಿಸಲು ಸೂಚಿಸಲಾಯಿತು. | |
| | | ಮಾಗನೂರಿನಿಂದ ಶೆಟ್ಟಿಹಳ್ಳಿ ಗೇಟ್ ವರೆಗೆ ಮಾರ್ಗದ ಮೇಲಿರುವ ಮರಗಳನ್ನು ತೆಗೆಸಲು ಕೋರಿದರು. | ಮರಗಳನ್ನು ತೆಗೆಸಲು ಬರುವುದಿಲ್ಲ ಮಾರ್ಗದ ಮೇಲಿರುವ ರೆಂಬೆ ಕೊಂಬೆಗಳನ್ನು ತೆಗೆಸಲು ಶಾಖಾಧಿಕಾರಿಗಳಿಗೆ ಸೂಚಿಸಲಾಗುವುದು ಎಂದು ತಿಳಿಸಲಾಯಿತು, ಹಾಗೂ ಶಾಖಾಧಿಕಾರಿಗಳಿಗೆ ಕ್ರಮ ಕೈಗೊಳ್ಳಲು ಸೂಚಿಸಲಾಯಿತು. | ಶಾಖಾಧಿಕಾರಿ, ಕಾಗೆಪುರ ಶಾಖೆ |
| | | ಮಾಗನೂರು ವ್ಯಾಪ್ತಿಯಲ್ಲಿ 2002-03 ನೇ ಸಾಲಿನಲ್ಲಿ ಐಪಿ ಸೆಟ್‌ಗೆ ಹಣ ಪಾವತಿಸಿದ್ದು ಇದುವರೆಗೂ ಮಾರ್ಗವನ್ನು ಅಭಿವೃದ್ದಿಪಡಿಸಿರುವುದಿಲ್ಲ ಎಂದು ತಿಳಿಸುತ್ತಾ ಅಭಿವೃದ್ದಿಪಡಿಸಲು ಕೋರಿರುತ್ತಾರೆ. | ಹಣ ಪಾವತಿಸಿದ ರಸೀದಿಗಳನ್ನು ತರುವುದು ನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ಹಾಗೂ ಶಾಖಾಧಿಕಾರಿಗಳಿಗೆ ಕ್ರಮ ಕೈಗೊಳ್ಳಲು ಸೂಚಿಸಲಾಯಿತು. | ಶಾಖಾಧಿಕಾರಿ, ಕಾಗೆಪುರ ಶಾಖೆ |
| | | ಸೋಲಾರ್ ವಿದ್ಯುತ್ ಪಡೆಯಲು ವಿವರಗಳನ್ನು ಕೋರಲಾಯಿತು. | ಉಪವಿಭಾಗದಲ್ಲಿ ಅರ್ಜಿ ನೊಂದಾಯಿಸಿ ಮಂಜೂರಾತಿಯಾದ ವಿದ್ಯುತ್ ಭಾರಕ್ಕೆ ತಕ್ಕಂತೆ ಸೊಲಾರ್‌ನಿಂದ ವಿದ್ಯುತ್ ಪಡೆಯಬಹುದು ಹಾಗು ಸ್ಥಾವರಕ್ಕೆ ಬಳಕೆಯಾಗಿ ಉಳಿದ ವಿದ್ಯುತ್‌ನ್ನು ಗ್ರಿಡ್‌ಗೆ ಹಿಂದಿರುಗಿಸಿ ಜಕಾತಿವಾರು ಹಣ ಪಡೆಯಬಹುದು ಮತ್ತು ಇದಕ್ಕೆ ಬೈಪೊಲಾರ್ ಮಾಪಕವನ್ನು ಅಳವಡಿಸಲಾಗುವುದು ಎಂದು ತಿಳಿಸಲಾಯಿತು. | ಸಹಾಯಕ ಕಾರ್ಯ ನಿವಾರ್ಹಕ ಇಂಜಿನಿಯರ್ ,ನಗರ ಉಪವಿಭಾಗ |
| | | ಮಾಗನೂರಿನಿಂದ ಮಾದಹಳ್ಳಿ ಗೇಟ್‌ವರೆಗೆ ವಾಹಕ ದುಸ್ಥಿತಿಯಲ್ಲಿರುತ್ತದೆ ಎಂದು ತಿಳಿಸಿದರು | ವಾಹಕ ಬದಲಾವಣೆಗೆ ಅಂದಾಜು ಪಟ್ಟಿಯನ್ನು ವಿಭಾಗ ಕಛೇರಿಗೆ ಸಲ್ಲಿಸಲಾಗಿದೆ ಎಂದು ಶಾಖಾಧಿಕಾರಿಗಳು ತಿಳಿಸಿದ್ದರಿಂದ ವಿಭಾಗ ಕಛೇರಿಯಲ್ಲಿ ಕ್ರಮ ಕೈಗೊಳ್ಳಲು ಕಾ.ನಿ.ಇಂ. | ಶಾಖಾಧಿಕಾರಿ, ಕಾಗೆಪುರ ಶಾಖೆ |

| | | | | | |
|---|---|---|---|---|---|
| | | | | ಮದ್ದೂರುರವರಿಗೆ ಸೂಚಿಸಲಾಯಿತು. | |
| | | | ಜನ ಸಂಪರ್ಕ ಸಭೆಯನ್ನು ಗ್ರಾಹಕರಿಗೆ ಅನುಕೂಲವಾಗುವಂತೆ ಇನ್ನು ಹೆಚ್ಚಿನ ಪ್ರಚಾರ ಮಾಡಬೇಕಾಗಿ ಕೋರಿದರು. | ಉಪವಿಭಾಗ,ಶಾಖಾ ಕಛೇರಿಗಳಲ್ಲಿ ಮುಂದಿನ ಸಭೆಗೆ ಹೆಚ್ಚು ಪ್ರಚಾರ ಮಾಡಿಸುವುದಾಗಿ ತಿಳಿಸಲಾಯಿತು. | ಸಹಾಯಕ ಕಾರ್ಯ ನಿವಾರ್ಹಕ ಇಂಜಿನಿಯರ್ ,ನಗರ ಉಪವಿಭಾಗ |
| 3 | ಶಿವಣ್ಣ, ಬಾಣಸಮುದ್ರ | 9972846899 | ಆರ್.ಬಿ ಹಳ್ಳಿ ವ್ಯಾಪ್ತಿಯಲ್ಲಿ ಮೇ-2016 ರಲ್ಲಿ ಐಪಿ ಸೆಟ್‌ಗೆ ಹಣ ಪಾವತಿಸಿದ್ದು ಇದುವರೆಗೂ ಮಾರ್ಗವನ್ನು ಅಭಿವೃದ್ಧಿಪಡಿಸಿರುವುದಿಲ್ಲ ಎಂದು ಹಾಗು ಅಭಿವೃಧ್ಧಿಪಡಿಸಲು ಎಷ್ಟು ಎಂದು ಕಾಲಮಿತಿಯನ್ನು ಕೇಳಿದರು. | 2016-17 ನೇ ಸಾಲಿನ ಯೂಎನ್‌ಐಪಿ ಕಾಮಗಾರಿಗಳನ್ನು ಜೇಷ್ಠತಾ ಪಟ್ಟಿಯನುಸಾರ ಕೈಗೊಳ್ಳಲಾಗುವುದು ನಿಮಗೆ ಅತಿ ತುರ್ತಾಗಿ ಸಂಪರ್ಕ ಬೇಕಾದರೆ ಶೀಘ್ರ ಸಂಪರ್ಕ ಯೋಜನೆಯಡಿ ಅರ್ಜಿ ಸಲ್ಲಿಸಿ ಮಾರ್ಗ ಸಂಬಂಧಿತ ಸಾಮಗ್ರಿಗಳನ್ನು ಹಾಕಿಸಿದಲ್ಲಿ ಪರಿವರ್ತಕವನ್ನು ನಿಗಮದಿಂದ ಅಳವಡಿಸಲಾಗುವುದು ಎಂದು ಗ್ರಾಹಕರ ಮನಹೊಲಿಸಲು ಪ್ರಯತ್ನಿಸಲಾಯಿತು. | ಸಹಾಯಕ ಇಂಜಿನಿಯರ್, ಘಟಕ-1, |
| 4 | ಶರತ್ಚಂದ್ರ, ಮಳವಳ್ಳಿ | 9448424447 | ಎನ್‌ಇಎಸ್ ಬಡಾವಣೆ ವ್ಯಾಪ್ತಿಯಲ್ಲಿ ಮೂರು ಬೀದಿಯಲ್ಲಿ ಯಾವಾಗಲೂ ವಿದ್ಯುತ್ ಸರಬರಾಜು ಇದ್ದು ಇನ್ನೆರಡು ಬೀದಿಯಲ್ಲಿ ವಿದ್ಯುತ್ ಸರಬರಾಜು ಪದೇ ಪದೇ ವ್ಯತ್ಯಯವಾಗುತ್ತಿದೆ ಇದನ್ನು ಸರಿಪಡಿಸಬೇಕೆಂದು ಕೋರಿರುತ್ತಾರೆ. | ಐಪಿಡಿಎಸ್ ಯೋಜನೆಯಡಿ ಯೂಜಿ ಕೇಬಲ್ ಹಾಕಿಸಿ ವಿದ್ಯುತ್ ಸರಬರಾಜು ಪದೇ ಪದೇ ವ್ಯತ್ಯಯವಾಗುವುದನ್ನು ಸರಿಪಡಿಸಲಾಗುವುದು ಎಂದು ತಿಳಿಸಿ ಶಾಖಾಧಿಕಾರಿಗಳಿಗೆ ಕ್ರಮ ಕೈಗೊಳ್ಳಲು ಸೂಚಿಸಲಾಯಿತು. | ಸಹಾಯಕ ಇಂಜಿನಿಯರ್, ಘಟಕ-1, |
| 5 | ಮಧು, ಹೊಸಪುರ | 9741039471 | ಗ್ರಾಮದ 250ಕೆವಿಎ ಪರಿವರ್ತಕದ ಎಲ್‌ಟಿ ಮಾರ್ಗವು ತುಂಬಾ ಹಳೆಯದಾಗಿದ್ದು ಪದೇ ಪದೇ ತುಂಡಾಗಿ ಬೀಳುತ್ತಿದ್ದು ಗ್ರಾಮಸ್ಥರು ಅಪಾಯ ಎದುರಿಸುತ್ತಿದ್ದೇವೆ ಶೀಘ್ರವೇ ಪರಿಹರಿಸಬೇಕೆಂದು ಕೋರಿರುತ್ತಾರೆ. | ವಿಭಾಗೀಯ ಕಛೇರಿಯಲ್ಲಿ ಮಂಜೂರಾಗಿದ್ದು ಅವಾರ್ಡ ಆಗಿರುತ್ತದೆ ಎಂದು ತಿಳಿದಮೇಲೆ ಶೀಘ್ರವೇ ವಾಹಕ ತೆಗೆದುಕೊಂಡು ಕಾಮಗಾರಿ ಮುಗಿಸಬೇಕಾಗಿ ಶಾಖಾಧಿಕಾರಿಗಳಿಗೆ ಸೂಚಿಸಲಾಯಿತು. | ಶಾಖಾಧಿಕಾರಿ, ಹಾಡ್ಲಿ, ಶಾಖೆ |

5/12/17

ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಿ.)
ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ಕಂಪನಿ
ಉಪ ವಿಭಾಗ - I ಮಳವಳ್ಳಿ

**ಪ್ರತಿಗಳನ್ನು :-**

1) ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ), ನಿಗಮ ಕಛೇರಿ, ಸೆಸ್ಕ್, ಮೈಸೂರು ರವರ ದಿವ್ಯ ಅವಗಾಹನನಗಾಗಿ.
2) ಪ್ರಧಾನ ವ್ಯವಸ್ಥಾಪಕರು(ಆ ಮತ್ತು ಮಾ.ಸಂ.) ನಿಗಮ ಕಛೇರಿ, ಸೆಸ್ಕ್, ಮೈಸೂರು ರವರ ದಿವ್ಯ ಅವಗಾಹನನಗಾಗಿ
2) ಮುಖ್ಯ ಇಂಜಿನಿಯರ್(ವಿ), ಸೆಸ್ಕ್, ವಲಯ ಕಛೇರಿ, ಮೈಸೂರು ರವರ ಅವಗಾಹನೆಗಾಗಿ.
3) ಅಧೀಕ್ಷಕ ಇಂಜಿನಿಯರ್(ವಿ), ಸೆಸ್ಕ್, ಮಂಡ್ಯ ವೃತ್ತ, ರವರ ಅವಗಾಹನೆಗಾಗಿ.
4) ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಸೆಸ್ಕ್, ಮದ್ದೂರು ವಿಭಾಗ, ರವರ ಅವಗಾಹನೆಗಾಗಿ.
5) ಸಹಾಯಕ ಇಂಜಿನಿಯರ್(ತಾಂ),ಸೆಸ್ಕ್, ನಗರ ಉ/ವಿ, ಮಳವಳ್ಳಿ ರವರ ಮಾಹಿತಿಗಾಗಿ.
6) ಸಹಾಯಕ ಇಂಜಿನಿಯರ್(ವಿ), ಘಟಕ-1 ಮತ್ತು 2, ರವರ ಮಾಹಿತಿಗಾಗಿ.
7) ಶಾಖಾಧಿಕಾರಿ, ಹಾಡ್ಲಿ / ಕಾಗೇಪುರ ರವರ ಮಾಹಿತಿಗಾಗಿ, ಸಲ್ಲಿಸುತ್ತ ತಮ್ಮ ಶಾಖಾ ವ್ಯಾಪ್ತಿಯ ಕುಂದು ಕೊರತೆಗಳ ಬಗ್ಗೆ ಸಭೆಯಲ್ಲಿ ನಿಗದಿ ಮಾಡಿರುವ ದಿನಾಂಕದೊಳಗೆ ಬಗೆ ಹರಿಸಲು ಸೂಚಿಸಲಾಗಿದೆ.
8) ಕಡತ.